جمعية خدمة المحتوى الإسلامي باللغات

ضيوف الرحمن
hajjumrh.com

# ಸಾರಾಂಶ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವ ಶಿಷ್ಟಾಚಾರಗಳು ಮತ್ತು ನಿಯಮಗಳು

ಕನ್ನಡ

كنادي



ضيوف الرحمن
hajjumrh.com

## Partners in Implementation

Content Association

Rowad Translation

Byenah

IslamHouse

This publication may be printed and disseminated by any means provided that the source is mentioned and no change is made to the text.

Tel : +966 50 244 7000
info@islamiccontent.org
Riyadh 13245-2836
www.islamiccontent.org


ಸರ್ವಸ್ತುತಿಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮೀಸಲು. ನಮ್ಮ ಪ್ರವಾದಿ ಮುಹಮ್ಮದ್(ಸ)ರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಎಲ್ಲಾ ಸಹಚರರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.

**ಮುಂದುವರಿದು ಹೇಳುವುದೇನೆಂದರೆ:**


ಇದು ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವ ಶಿಷ್ಟಾಚಾರಗಳು ಮತ್ತು ನಿಯಮಗಳ ಕುರಿತಾದ ಸಂಕ್ಷಿಪ್ತ ಕೃತಿಯಾಗಿದೆ. ಪ್ರವಾದಿ ಮಸೀದಿಯನ್ನು ಸಂದರ್ಶಿಸುವವರಿಗೆ ಅಗತ್ಯವಿರುವ ಹೆಚ್ಚಿನ ವಿಷಯಗಳನ್ನು ವಿವರಿಸಿಕೊಡಲು ನಾವು ಇದರಲ್ಲಿ ಶ್ರಮಿಸಿದ್ದೇವೆ.

ಇದನ್ನು ಅಲ್ಲಾಹನ ಗೌರವಾನ್ವಿತ ಮುಖವನ್ನು ಬಯಸಿ ಅವನಿಗಾಗಿ ಮೀಸಲುಗೊಳಿಸುವಂತೆ ಮತ್ತು ಇದರಿಂದ ಎಲ್ಲಾ ಮುಸ್ಲಿಮರಿಗೆ ಪ್ರಯೋಜನವಾಗುವಂತೆ ಮಾಡಲು ನಾವು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇವೆ.

**ವಿವಿಧ ಭಾಷೆಗಳಲ್ಲಿ
ಇಸ್ಲಾಮಿ ವಿಷಯಗಳ
ಸೇವಾ ಸಮಿತಿಯ
ಜ್ಞಾನ ಮಂಡಳಿ**



ضيوف الرحمن
hajjumrh.com



# ಸಾರಾಂಶ
# ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವ ಶಿಷ್ಟಾಚಾರಗಳು ಮತ್ತು ನಿಯಮಗಳು





1 ಪ್ರವಾದಿ (ಸ) ರವರ ಮಸೀದಿಯನ್ನು ಸಂದರ್ಶಿಸುವುದು ಅಪೇಕ್ಷಣೀಯವಾಗಿದೆ. ಇದಕ್ಕೆ ನಿರ್ದಿಷ್ಟ ಸಮಯ ಎಂಬುದಿಲ್ಲ. ಇದು ಹಜ್ಜ್ ಕರ್ಮಗಳೊಂದಿಗೆ ಸೇರಿಕೊಂಡಿಲ್ಲ. ಹಜ್ಜ್ ನಿರ್ವಹಿಸುವವರು - ಅವರು ಪುರುಷರಾಗಿರಲಿ ಅಥವಾ ಮಹಿಳೆಯರಾಗಿರಲಿ - ಪ್ರವಾದಿ (ಸ) ರವರ ಸಮಾಧಿಯನ್ನು ಅಥವಾ ಬಕೀಅ ಕಬರಸ್ಥಾನವನ್ನು ಸಂದರ್ಶಿಸುವುದು ಕಡ್ಡಾಯವಲ್ಲ.

2 ಪ್ರವಾದಿ (ಸ) ರವರ ಸಮಾಧಿಯನ್ನು ಸಂದರ್ಶಿಸುವ ಉದ್ದೇಶದಿಂದ ಯಾತ್ರೆ ಕೈಗೊಳ್ಳುವುದು ಮತ್ತು ಪ್ರಯಾಣ ಬೆಳೆಸುವುದು ಸಮ್ಮತಾರ್ಹವಲ್ಲ. ಏಕೆಂದರೆ ಆರಾಧನೆಯ ಉದ್ದೇಶದಿಂದ ಯಾತ್ರೆ ಕೈಗೊಳ್ಳುವುದು ಸಮಾಧಿಗಳನ್ನು ಸಂದರ್ಶಿಸುವುದಕ್ಕೆ ಆಗಿರಬಾರದು, ಬದಲಿಗೆ, ಕೇವಲ ಮೂರು ಮಸೀದಿಗಳನ್ನು ಸಂದರ್ಶಿಸುವುದಕ್ಕೆ ಮಾತ್ರವಾಗಿರಬೇಕು. **ಪ್ರವಾದಿ (ಸ) ರವರು ಹೇಳಿದರು:**

(لا تشدوا الرحال إلا إلى ثلاثة مساجد: مسجدي هذا، والمسجد الحرام، والمسجد الأقصى)

"ಮೂರು ಮಸೀದಿಗಳಿಗೆ ಮಾತ್ರ ನೀವು ಯಾತ್ರೆ ಕೈಗೊಳ್ಳಬೇಕು: ನನ್ನ ಈ ಮಸೀದಿ, ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದುಲ್-ಅಕ್ಸಾ."[ಬುಖಾರಿ (1189) ಮತ್ತು ಮುಸ್ಲಿಂ (827), ಇದು ಮುಸ್ಲಿಂರ ಪದಗಳಾಗಿವೆ]. ಆದ್ದರಿಂದ, ಮದೀನಾದಿಂದ ದೂರದಲ್ಲಿರುವವರು ಸಮಾಧಿಯನ್ನು ಸಂದರ್ಶಿಸುವ ಉದ್ದೇಶದಿಂದ ಯಾತ್ರೆ ಕೈಗೊಳ್ಳಬಾರದು. ಆದರೆ ಪವಿತ್ರ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವ ಉದ್ದೇಶದಿಂದ ಯಾತ್ರೆ ಕೈಗೊಳ್ಳಲು ಅವರಿಗೆ ಧರ್ಮವು ನಿರ್ದೇಶಿಸುತ್ತದೆ. (ಈ ಉದ್ದೇಶದಿಂದ) ಅವರು ಅಲ್ಲಿಗೆ ತಲುಪಿದರೆ, ಪ್ರವಾದಿ (ಸ) ರವರ ಮತ್ತು ಅವರ ಸಹಚರರ ಸಮಾಧಿಗಳನ್ನು ಸಂದರ್ಶಿಸಬಹುದು. ಆದ್ದರಿಂದ, ಪ್ರವಾದಿ (ಸ) ರವರ ಮಸೀದಿ ಸಂದರ್ಶನಕ್ಕೆ ಅನುಬಂಧಿತವಾಗಿ ಅವರ ಸಮಾಧಿ ಸಂದರ್ಶನ ಮಾಡಬಹುದು.

3 ಪ್ರವಾದಿ (ಸ) ರವರ ಸಮಾಧಿಯನ್ನು ಅಥವಾ ಬೇರೆಯವರ ಸಮಾಧಿಯನ್ನು ಮಹಿಳೆಯರು ಸಂದರ್ಶಿಸುವುದು ಶರಿಯತ್‌ನಲ್ಲಿ ಅನುಮೋದಿಸಿಲ್ಲ; ಏಕೆಂದರೆ ಪ್ರವಾದಿ (ಸ) ರವರು ಪದೇ ಪದೇ ಸಮಾಧಿಗಳನ್ನು ಸಂದರ್ಶಿಸುವ ಮಹಿಳೆಯರನ್ನು ಶಪಿಸಿದ್ದಾರೆ. ಏಕೆಂದರೆ ಅವರು ಸಮಾಧಿ ಸಂದರ್ಶನ ಮಾಡುವಾಗ ಗೋಗರೆದು ಅಳುವುದು, ಶೃಂಗಾರ ಪ್ರದರ್ಶನ ಮುಂತಾದ ಶರಿಯತ್ ವಿರೋಧಿಸಿದ ವಿಷಯಗಳು ಸಂಭವಿಸಬಹುದು. ಆದರೆ ಮಸೀದಿ ಮುಂತಾದ ಸ್ಥಳಗಳಲ್ಲಿ ಪ್ರವಾದಿ (ಸ) ರವರ ಮೇಲೆ ಹೆಚ್ಚು ಹೆಚ್ಚು ದುರೂದ್ (ಸಲಾತ್) ಮತ್ತು ಸಲಾಮ್ ಹೇಳುವುದು ಅವರಿಗೆ ಅಪೇಕ್ಷಣೀಯವಾಗಿದೆ. ಅವರು ಎಲ್ಲಿಯೇ ಇದ್ದರೂ ಸಹ ಅವರು ಹೇಳುವಾ ದುರೂದ್ ಪ್ರವಾದಿ (ಸ) ರಿಗೆ ತಲುಪುತ್ತದೆ. ಏಕೆಂದರೆ ಪ್ರವಾದಿ (ಸ) ರವರು ಹೇಳಿದ್ದಾರೆ:

(لا تجعلوا بيوتكم قبوراً، ولا تجعلوا قبري عيداً، وصلُّوا عليَّ فإن صلاتكم تبلغني حيث كنتم)

"ನಿಮ್ಮ ಮನೆಗಳನ್ನು ಸಮಾಧಿಗಳಂತೆ ಮಾಡಬೇಡಿ, ಮತ್ತು ನನ್ನ ಸಮಾಧಿಯನ್ನು ಹಬ್ಬದ ಸ್ಥಳವನ್ನಾಗಿ ಮಾಡಬೇಡಿ. ನನ್ನ ಮೇಲೆ ಸಲಾತ್ (ದರೂದ್) ಹೇಳಿರಿ. ಏಕೆಂದರೆ ನಿಮ್ಮ ಸಲಾತ್ ನೀವು ಎಲ್ಲೇ ಇದ್ದರೂ ನನಗೆ ತಲುಪುತ್ತದೆ."

**ಪ್ರವಾದಿ (ಸ) ರವರು ಹೇಳಿದರು:**

(إن لله ملائكة سياحين في الأرض يبلغوني من أمتي السلام).

"ಅಲ್ಲಾಹನಿಗೆ ಭೂಮಿಯಲ್ಲಿ ಸಂಚರಿಸುವ ಕೆಲವು ದೇವದೂತರುಗಳು ಇದ್ದಾರೆ. ಅವರು ನನ್ನ ಉಮ್ಮತ್ತಿನಿಂದ (ಸಮುದಾಯದಿಂದ) ನನಗೆ ಸಲಾಂ ತಲುಪಿಸುತ್ತಾರೆ."



4. ಪವಿತ್ರ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಪ್ರವೇಶಿಸಿದರೆ, ಬಲಗಾಲನ್ನು ಮೊದಲು ಇಡುವುದು ಮತ್ತು ಇತರೆಲ್ಲಾ ಮಸೀದಿಗಳನ್ನು ಪ್ರವೇಶಿಸುವಾಗ ಹೇಳುವಂತೆಯೇ, "ಅಲ್ಲಾಹುಮ್ಮಫ್ತಹ್ ಲೀ ಅಬ್ವಾಬ ರಹ್ಮತಿಕ" (ಓ ಅಲ್ಲಾಹ್, ನನಗೆ ನಿನ್ನ ಕರುಣೆಯ ಬಾಗಿಲುಗಳನ್ನು ತೆರೆದುಕೊಡು" ಎಂದು ಹೇಳುವುದು ಅಪೇಕ್ಷಣೀಯವಾಗಿದೆ.

5. ಪ್ರವಾದಿ (ಸ) ರವರ ಮಸೀದಿಯನ್ನು ಪ್ರವೇಶಿಸುವಾಗ ಹೇಳುವ ಯಾವುದೇ ನಿರ್ದಿಷ್ಟ ದಿಕ್ರ್ (ಸ್ಮರಣೆ) ಇಲ್ಲ.

6. ನಂತರ, ಎರಡು ರಕ್‌ಅತ್ ತಹಿಯ್ಯತ್ ನಮಾಝ್ ಮಾಡಬೇಕು.

7. ಅದು ನಮಾಝ್ ಮಾಡುವುದು ನಿಷಿದ್ಧವಲ್ಲದ ಸಮಯವಾಗಿದ್ದರೆ, ಎರಡೆರಡು ರಕ್‌ಅತ್‌ಗಳಂತೆ ಎಷ್ಟು ಬೇಕಾದರೂ ಐಚ್ಛಿಕ ನಮಾಝ್ ಮಾಡಬಹುದು. ಅಲ್ಲಾಹನ ಸಂದೇಶವಾಹಕರು (ಸ) ಹೇಳಿದರು:

(صلاة في مسجدي هذا خير من ألف صلاة فيما سواه إلا المسجد الحرام)

"ನನ್ನ ಈ ಮಸೀದಿಯಲ್ಲಿ ಮಾಡುವ ಒಂದು ನಮಾಝ್, ಮಸ್ಜಿದುಲ್-ಹರಾಮ್ ಹೊರತುಪಡಿಸಿ, ಬೇರೆ ಯಾವುದೇ ಮಸೀದಿಯಲ್ಲಿ ಮಾಡುವ ಸಾವಿರ ನಮಾಝ್‌ಗಳಿಗಿಂತ ಶ್ರೇಷ್ಠವಾಗಿದೆ."

[ಬುಖಾರಿ (1190) ಮತ್ತು ಮುಸ್ಲಿಂ (1394)].





8 ಸಾಧ್ಯವಾಗುವುದಾದರೆ, ಪ್ರವಾದಿ (ಸ) ರವರ ಮಿಂಬರ್ ಮತ್ತು ಅವರ ಕೊಠಡಿಯ (ಮನೆಯ) ನಡುವಿನಲ್ಲಿರುವ ರೌಧಾ ಎಂಬ ಸ್ಥಳದಲ್ಲಿ ನಮಾಝ್ ಮಾಡಲು ಪ್ರಯತ್ನಿಸಬೇಕು. ಏಕೆಂದರೆ ಪ್ರವಾದಿ (ಸ) ರವರು ಹೇಳಿದರು:

(ما بين بيتي ومنبري روضة من رياض الجنة)

**"ನನ್ನ ಮನೆ ಮತ್ತು ನನ್ನ ಮಿಂಬರ್ ನಡುವಿನ ಸ್ಥಳವು ಸ್ವರ್ಗದ ಉದ್ಯಾನಗಳಲ್ಲಿ ಒಂದಾಗಿದೆ."**

[ಬುಖಾರಿ (1195) ಮತ್ತು ಮುಸ್ಲಿಂ (1390)].

ಅದು ಸಾಧ್ಯವಾಗದಿದ್ದರೆ, ಮಸೀದಿಯ ಯಾವುದೇ ದಿಕ್ಕಿನಲ್ಲಿ ನಮಾಝ್ ಮಾಡಬಹುದು. ಇದು ಸಾಮೂಹಿಕ (ಜಮಾಅತ್) ನಮಾಝ್ ಆಗಿರದಿದ್ದರೆ ಮಾತ್ರ. ಸಾಮೂಹಿಕ (ಜಮಾಅತ್) ನಮಾಝ್ ಆಗಿದ್ದರೆ, ಯಾವಾಗಲೂ ಇಮಾಮರ ನೇರ ಹಿಂಭಾಗದಲ್ಲಿರುವ ಮೊದಲ ಸಾಲಿನಲ್ಲಿ ನಿಲ್ಲಬೇಕು. ಏಕೆಂದರೆ, ಹೀಗೆ ನಿಲ್ಲಬೇಕೆಂದು ಅನಿರ್ದಿಷ್ಟವಾದ ರೀತಿಯಲ್ಲಿ ಅನೇಕ ಹದೀಸ್‌ಗಳು ವರದಿಯಾಗಿವೆ.

## 9 ಪ್ರವಾದಿ (ಸ) ರವರ ಮತ್ತು ಅವರ ಇಬ್ಬರು ಸಹಚರರ ಸಮಾಧಿಗಳನ್ನು ಸಂದರ್ಶಿಸಲು ಬಯಸುವುದಾದರೆ:




A. ಪ್ರವಾದಿ (ಸ) ರವರ ಸಮಾಧಿಯ ಮುಂದೆ ವಿನಯ, ಗೌರವ ಮತ್ತು ಮೃದುವಾದ ಧ್ವನಿಯಿಂದ ನಿಲ್ಲಬೇಕು. ನಂತರ ಅವರಿಗೆ ಹೀಗೆ ಸಲಾಂ ಹೇಳಬೇಕು: "ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹಿ ವರಹ್ಮತುಲ್ಲಾಹಿ ವಬರಕಾತುಹು" (ಓ ಅಲ್ಲಾಹನ ಸಂದೇಶವಾಹಕರೇ, ನಿಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಆಶೀರ್ವಾದಗಳು ಇರಲಿ). ಹೀಗೆ ಹೇಳಿದರೂ ತೊಂದರೆಯಿಲ್ಲ: **"ಅಶ್‌ಹದು ಅನ್ನಕ ರಸೂಲಲ್ಲಾಹಿ ಹಕ್ಕನ್ ವಅನ್ನಕ ಖದ್ ಬಲ್ಲಗ್‌ತ ರ್ರಿಸಾಲತ ವಅದ್ದಯ್ತಲ್ ಅಮಾನತ ವಜಾಹದ್ತ ಫಿಲ್ಲಾಹಿ ಹಕ್ಕ ಜಿಹಾದಿಹಿ ವನಸಹ್ತಲ್ ಉಮ್ಮತ ಫಜಝಾಕಲ್ಲಾಹು ಅನ್ ಉಮ್ಮತಿಕ ಅಫ್‌ದಲ ಮಾ ಜಝಾ ನಬಿಯ್ಯನ್ ಅನ್ ಉಮ್ಮತಿಹಿ" (ನೀವು ನಿಜವಾಗಿಯೂ ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ವಹಿಸುತ್ತೇನೆ. ನೀವು ಸಂದೇಶವನ್ನು ತಲುಪಿಸಿದ್ದೀರಿ, ನಂಬಿಕೆಯಿಂದ ಅರ್ಪಿಸಿದ್ದನ್ನು ಈಡೇರಿಸಿದ್ದೀರಿ, ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದಂತೆಯೇ ಹೋರಾಡಿದ್ದೀರಿ, ಮತ್ತು ನೀವು ಸಮುದಾಯಕ್ಕೆ ಉಪದೇಶ ನೀಡಿದ್ದೀರಿ. ಆದ್ದರಿಂದ ಅಲ್ಲಾಹು ನಿಮ್ಮ ಸಮುದಾಯದ ಪರವಾಗಿ ಪ್ರವಾದಿಗೆ ನೀಡಬಹುದಾದ ಅತ್ಯುತ್ತಮ ಪ್ರತಿಫಲವನ್ನು ನಿಮಗೆ ನೀಡಲಿ).**

B. ನಂತರ ಸ್ವಲ್ಪ ಬಲಕ್ಕೆ ಸಾಗಿ ಅಬೂಬಕರ್ ಸಿದ್ದೀಕ್ (ರ) ರಿಗೆ ಸಲಾಂ ಹೇಳಬೇಕು.

C. ನಂತರ, ಮತ್ತೆ ಸ್ವಲ್ಪ ಬಲಕ್ಕೆ ಸಾಗಿ ಉಮರ್ ಬಿನ್ ಖತ್ತಾಬ್ (ರ) ರಿಗೆ ಸಲಾಂ ಹೇಳಬೇಕು. ಇಬ್ನ್ ಉಮರ್ (ರ) ರವರು ಪ್ರವಾದಿ (ಸ) ಮತ್ತು ಅವರ ಸಹಚರರಿಗೆ ಸಲಾಂ ಹೇಳುವಾಗ ಹೆಚ್ಚಾಗಿ ಇದಕ್ಕಿಂತ ಹೆಚ್ಚು ಹೇಳುತ್ತಿರಲಿಲ್ಲ: "ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹ್, ಅಸ್ಸಲಾಮು ಅಲೈಕ ಯಾ ಅಬಾಬಕರ್, ಅಸ್ಸಲಾಮು ಅಲೈಕ ಯಾ ಅಬತಾಹ್" (ಓ ಅಲ್ಲಾಹನ ಸಂದೇಶವಾಹಕರೇ, ನಿಮ್ಮ ಮೇಲೆ ಶಾಂತಿ ಇರಲಿ, ಓ ಅಬೂ ಬಕರ್, ನಿಮ್ಮ ಮೇಲೆ ಶಾಂತಿ ಇರಲಿ, ಓ ನನ್ನ ತಂದೆಯವರೇ, ನಿಮ್ಮ ಮೇಲೆ ಶಾಂತಿ ಇರಲಿ).ನಂತರ ಅವರು ಹೊರಟುಹೋಗುತ್ತಿದ್ದರು.

D. ಪ್ರವಾದಿ (ಸ) ರವರ ಮತ್ತು ಅವರ ಇಬ್ಬರು ಸಹಚರರ ಸಮಾಧಿಗಳ ಬಳಿ ಹೆಚ್ಚು ಹೊತ್ತು ನಿಲ್ಲುವುದು ಅಥವಾ ಪ್ರಾರ್ಥಿಸುವುದು ಸೂಕ್ತವಲ್ಲ. ಇಮಾಂ ಮಾಲಿಕ್ ಅವರು ಇದನ್ನು ಇಷ್ಟಪಡುತ್ತಿರಲಿಲ್ಲ. ಅವರು ಹೇಳುತ್ತಿದ್ದರು: **"ಅದು ಪೂರ್ವಿಕರು (ಸಲಫ್) ಮಾಡದ ಒಂದು ಬಿದ್‌ಅತ್ (ನೂತನಾಚಾರ) ಆಗಿದೆ. ಈ ಸಮುದಾಯದ ಮೊದಲನೇ ತಲೆಮಾರಿನವರು ಯಾವುದರಿಂದ ಸುಧಾರಣೆಯಾದರೋ ಅದರಿಂದಲೇ ಹೊರತು ಈ ಸಮುದಾಯದ ಕೊನೆಯ ತಲೆಮಾರು ಸುಧಾರಣೆಯಾಗುವುದಿಲ್ಲ."**

E. ಕೆಲವು ಸಂದರ್ಶಕರು ಪ್ರವಾದಿ (ಸ) ರವರ ಸಮಾಧಿಯ ಬಳಿ ಧ್ವನಿ ಎತ್ತುವುದು ಮತ್ತು ಅಲ್ಲಿ ದೀರ್ಘಕಾಲ ನಿಲ್ಲುವುದು ಧರ್ಮನಿಯಮಕ್ಕೆ ವಿರುದ್ಧವಾಗಿದೆ. ಅಲ್ಲಾಹು ಹೇಳುತ್ತಾನೆ:

﴿يا أيها الذين آمنوا لا ترفعوا أصواتكم فوق صوت النبي ولا تجهروا له بالقول كجهر بعضكم لبعض أن تحبط أعمالكم وأنتم لا تشعرون ، إن الذين يغضون أصواتهم عند رسول الله أولئك الذين امتحن الله قلوبهم للتقوى لهم مغفرة وأجر عظيم*إن الذين يغضون أصواتهم عند رسول الله أولئك الذين امتحن الله قلوبهم للتقوى لهم مغفرة وأجر عظيم﴾

"ಓ ಸತ್ಯವಿಶ್ವಾಸಿಗಳೇ! ನಿಮ್ಮ ಧ್ವನಿಗಳನ್ನು ಪ್ರವಾದಿಯ ಧ್ವನಿಗಿಂತ ಎತ್ತಬೇಡಿ. ನೀವು ಪರಸ್ಪರ ಜೋರಾಗಿ ಮಾತನಾಡುವಂತೆ ಅವರೊಡನೆ ಜೋರಾಗಿ ಮಾತನಾಡಬೇಡಿ. ನೀವು ತಿಳಿಯದೆಯೇ ನಿಮ್ಮ ಕರ್ಮಗಳು ನಿಷ್ಫಲವಾಗದಿರುವುದಕ್ಕಾಗಿ. ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರ ಬಳಿ ತಮ್ಮ ಧ್ವನಿಗಳನ್ನು ತಗ್ಗಿಸುವವರು ಯಾರೋ, ಅವರ ಹೃದಯಗಳನ್ನು ಅಲ್ಲಾಹು ದೇವಭಯಕ್ಕಾಗಿ ಪರೀಕ್ಷಿಸಿದ್ದಾನೆ. ಅವರಿಗೆ ಕ್ಷಮೆ ಮತ್ತು ಮಹಾ ಪ್ರತಿಫಲವಿದೆ." [ಅಲ್-ಹುಜುರಾತ್: 3-2]

ಪ್ರವಾದಿ (ಸ) ಅವರ ಸಮಾಧಿಯ ಬಳಿ ದೀರ್ಘಕಾಲ ನಿಲ್ಲುವುದು ಮತ್ತು ಪದೇ ಪದೇ ಸಲಾಂ ಹೇಳುವುದು ಜನಸಂದಣಿಗೆ, ಗದ್ದಲಕ್ಕೆ ಮತ್ತು ಅವರ ಸಮಾಧಿಯ ಬಳಿ ಧ್ವನಿ ಹೆಚ್ಚಾಗಲು ಕಾರಣವಾಗುತ್ತದೆ. ಇದು ಅಲ್ಲಾಹು ಈ ಸ್ಪಷ್ಟವಾದ ವಚನದಲ್ಲಿ ಮುಸ್ಲಿಮರಿಗೆ ಆದೇಶಿಸಿರುವುದಕ್ಕೆ ವಿರುದ್ಧವಾಗಿದೆ. ಪ್ರವಾದಿ(ಸ) ರವರು ಜೀವಂತವಾಗಿದ್ದಾಗಲೂ ಮತ್ತು ಮರಣಾನಂತರವೂ ಗೌರವಾನ್ವಿತರಾಗಿದ್ದಾರೆ. ಆದ್ದರಿಂದ ಒಬ್ಬ ವಿಶ್ವಾಸಿ ಅವರ ಸಮಾಧಿಯ ಬಳಿ ಧಾರ್ಮಿಕ ಶಿಷ್ಟಾಚಾರಕ್ಕೆ ವಿರುದ್ಧವಾದದ್ದನ್ನು ಮಾಡಬಾರದು.

F. ಅದೇ ರೀತಿ, ಕೆಲವು ಸಂದರ್ಶಕರು ಮತ್ತು ಇತರರು ಅವರ ಸಮಾಧಿಗೆ ಮುಖ ಮಾಡಿ ನಿಂತು ಕೈಗಳನ್ನು ಎತ್ತಿ ಪ್ರಾರ್ಥನೆ ಮಾಡುವುದು ಅಲ್ಲಾಹನ ಸಂದೇಶವಾಹಕರ(ಸ) ಸಹಚರರು ಮತ್ತು ಅವರನ್ನು ಅನುಸರಿಸಿದ ಸಜ್ಜನ ಪೂರ್ವಿಕರ ಮಾರ್ಗಕ್ಕೆ ವಿರುದ್ಧವಾಗಿದೆ. ಅಷ್ಟೇ ಅಲ್ಲ, ಅದು ಹೊಸದಾಗಿ ಸೇರಿಸಲಾದ ಬಿದ್‌ಅತ್‌ಗಳಲ್ಲಿ ಒಂದಾಗಿದೆ.

G. ಅದೇ ರೀತಿ, ಕೆಲವು ಸಂದರ್ಶಕರು ಪ್ರವಾದಿ (ಸ) ರಿಗೆ ಸಲಾಂ ಹೇಳುವಾಗ, ನಮಾಜ್ ಮಾಡುವವರಂತೆ ತಮ್ಮ ಬಲಗೈಯನ್ನು ಎಡಗೈಯ ಮೇಲೆ ಎದೆಯ ಮೇಲೆ ಅಥವಾ ಕೆಳಗೆ ಇಟ್ಟುಕೊಳ್ಳುತ್ತಾರೆ. ಈ ವಿಧಾನದಲ್ಲಿ ಪ್ರವಾದಿ (ಸ) ರಿಗೆ ಸಲಾಂ ಹೇಳುವುದು ಸಮ್ಮತಾರ್ಹವಲ್ಲ. ಏಕೆಂದರೆ ಇದು ವಿನಯ, ವಿಧೇಯತೆ ಮತ್ತು ಆರಾಧನೆಯ ಭಾಗವಾಗಿದೆ. ಇದು ಅಲ್ಲಾಹನಿಗೆ ಮಾತ್ರ ಸೂಕ್ತವಾಗಿದೆ. ಹಾಫಿಝ್ ಇಬ್ನ್ ಹಜರ್ (ರ) ತಮ್ಮ ಫತ್ಹುಲ್ ಬಾರಿಯಲ್ಲಿ ಅನೇಕ ವಿದ್ವಾಂಸರಿಂದ ಇದನ್ನು ಉಲ್ಲೇಖಿಸಿದ್ದಾರೆ.

10 (ಪ್ರವಾದಿಯವರ ಸಮಾಧಿಯ) ಗೋಡೆಯನ್ನು ಸ್ಪರ್ಶಿಸುವ ಮೂಲಕ ಅಲ್ಲಾಹನ ಸಾಮೀಪ್ಯವನ್ನು ಬಯಸುವುದು ಯಾರಿಗೂ ಸಮ್ಮತಾರ್ಹವಲ್ಲ. ಹಾಗೆಯೇ ಅದರ ಸುತ್ತಲೂ ಪ್ರದಕ್ಷಿಣೆ ಹಾಕಬಾರದು. ತಮ್ಮ ಅಗತ್ಯಗಳನ್ನು ಪೂರೈಸಲು, ತಮ್ಮ ರೋಗವನ್ನು ಗುಣಪಡಿಸಲು, ಹಾಗೂ ಇತರ ಆವಶ್ಯಕತೆಗಳನ್ನು ಪ್ರವಾದಿ(ಸ) ರೊಂದಿಗೆ ಬೇಡಬಾರದು. ಏಕೆಂದರೆ ಇದೆಲ್ಲವನ್ನೂ ಅಲ್ಲಾಹನಿಂದ ಮಾತ್ರ ಕೇಳಬೇಕು.

11 ಮದೀನಾ ಸಂದರ್ಶಕರು ಮದೀನಾದಲ್ಲಿರುವ ಸಮಯದಲ್ಲಿ, ಖುಬಾ ಮಸೀದಿಗೆ ಭೇಟಿ ನೀಡುವುದು ಮತ್ತು ಅಲ್ಲಿ ನಮಾಝ್ ಮಾಡುವುದು ಅಪೇಕ್ಷಣೀಯವಾಗಿದೆ. ಏಕೆಂದರೆ ಪ್ರವಾದಿ (ಸ) ರವರು ವಾಹನದಲ್ಲಿ ಮತ್ತು ಕಾಲ್ನಡಿಗೆಯಲ್ಲಿ ಅಲ್ಲಿಗೆ ಹೋಗಿ ಎರಡು ರಕ್‌ಅತ್ ನಮಾಝ್ ಮಾಡುತ್ತಿದ್ದರು. ಸಹಲ್ ಬಿನ್ ಹನೀಫ್ (ರ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಸ) ಹೇಳಿದರು:


(من تطهر في بيته ثم أتى مسجد قباء فصلى فيه صلاةً كان له كأجر عمرة).

**"ಯಾರು ತಮ್ಮ ಮನೆಯಲ್ಲಿ ಶುದ್ಧರಾಗಿ (ಅಂದರೆ ವುದೂ ನಿರ್ವಹಿಸಿ) ನಂತರ ಖುಬಾ ಮಸೀದಿಗೆ ಬಂದು ಅಲ್ಲಿ ನಮಾಝ್ ಮಾಡುತ್ತಾರೋ, ಅವರಿಗೆ ಉಮ್ರಾ ನಿರ್ವಹಿಸಿದ ಪ್ರತಿಫಲ ಸಿಗುತ್ತದೆ."**

12 ಪುರುಷರಿಗೆ ಬಕೀಅ ಸಮಾಧಿಗಳನ್ನು (ಮದೀನಾದ ಕಬರಸ್ಥಾನ), ಹುತಾತ್ಮರ ಸಮಾಧಿಗಳನ್ನು ಮತ್ತು ಹಂಝ (ರ) ರವರ ಸಮಾಧಿಯನ್ನು ಸಂದರ್ಶಿಸುವುದು ಸುನ್ನತ್ ಆಗಿದೆ. ಏಕೆಂದರೆ ಪ್ರವಾದಿ (ಸ) ರವರು ಅವುಗಳನ್ನು ಸಂದರ್ಶಿಸಿ ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಪ್ರವಾದಿ (ಸ) ರವರು ಹೇಳಿದರು:
(كنت نهيتكم عن زيارة القبور، فزوروها فإنها تذكركم الآخرة)
"ನಾನು ನಿಮಗೆ ಸಮಾಧಿಗಳನ್ನು ಸಂದರ್ಶಿಸುವುದನ್ನು ನಿಷೇಧಿಸಿದ್ದೆ. ಆದರೆ ಈಗ ಅವುಗಳನ್ನು ಸಂದರ್ಶಿಸಿರಿ. ಏಕೆಂದರೆ ಅವು ನಿಮಗೆ ಪರಲೋಕವನ್ನು ನೆನಪಿಸುತ್ತವೆ." ಅವರ ಸಮಾಧಿಗಳನ್ನು ಸಂದರ್ಶಿಸುವಾಗ, ಇತರ ಸಮಾಧಿಗಳನ್ನು ಸಂದರ್ಶಿಸುವಾಗ ಹೇಳುವಂತೆಯೇ ಹೇಳಬೇಕು: "ಅಸ್ಸಲಾಮು ಅಲೈಕುಂ ಅಹ್ಲ ದ್ದಿಯಾರಿ ಮಿನಲ್ ಮುಅಮಿನೀನ ವಲ್ ಮುಸ್ಲಿಮೀನ್. ವಇನ್ನಾ ಇನ್ ಶಾ ಅಲ್ಲಾಹು ಬಿಕುಮ್ ಲಾಹಿಕೂನ್. ವಯರ್ಹಮುಲ್ಲಾಹುಲ್ ಮುಸ್ತಕ್ದಿಮೀನ ಮಿನ್ನಾ ವಲ್ ಮುಸ್ತಅಖಿರೀನ್. ನಸ್‌ಅಲುಲ್ಲಾಹ ಲನಾ ವಲಕುಮುಲ್ ಆಫಿಯ." (ಸತ್ಯವಿಶ್ವಾಸಿಗಳು ಮತ್ತು ಮುಸ್ಲಿಮರಾದ ಈ ವಾಸಸ್ಥಳದ ನಿವಾಸಿಗಳೇ! ನಿಮ್ಮ ಮೇಲೆ ಶಾಂತಿ ಇರಲಿ. ಅಲ್ಲಾಹನು ಇಚ್ಛಿಸಿದರೆ ನಾವು ನಿಮ್ಮನ್ನು ಸೇರಿಕೊಳ್ಳುತ್ತೇವೆ. ನಮ್ಮಲ್ಲಿ ಮುಂದಿನವರು ಮತ್ತು ಹಿಂದಿನವರಿಗೆ ಅಲ್ಲಾಹನು ಕರುಣೆ ತೋರಲಿ. ಅಲ್ಲಾಹನು ನಮಗೂ ನಿಮಗೂ ಕ್ಷೇಮವನ್ನು ನೀಡಲಿ ಎಂದು ನಾವು ಬೇಡಿಕೊಳ್ಳುತ್ತೇವೆ).

13 ಸಮಾಧಿಗಳನ್ನು ಸಂದರ್ಶಿಸುವ ಉದ್ದೇಶವು ಪರಲೋಕವನ್ನು ನೆನಪಿಸಿಕೊಳ್ಳುವುದು, ಮರಣ ಹೊಂದಿದವರಿಗಾಗಿ ಪ್ರಾರ್ಥಿಸುವ ಮೂಲಕ ಅವರಿಗೆ ಉಪಕಾರ ಮಾಡುವುದು ಮತ್ತು **ಪ್ರವಾದಿ (ಸ) ರವರ ಸುನ್ನತ್ ಅನ್ನು ಅನುಸರಿಸುವುದಾಗಿದೆ** ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದೇ ಧರ್ಮವು ನಿರ್ದೇಶಿಸಿದ ರೀತಿಯಲ್ಲಿರುವ ಸಮಾಧಿ ಸಂದರ್ಶನ.

**14** ಆದರೆ, ಅವರ ಸಮಾಧಿಗಳ ಬಳಿ ಪ್ರಾರ್ಥನೆ ಮಾಡುವ ಉದ್ದೇಶದಿಂದ, ಅಥವಾ ಅವರ ಮೂಲಕ, ಅಥವಾ ಅವರ ಘನತೆಯ (ಜಾಹ್) ಮೂಲಕ ಅಲ್ಲಾಹನಲ್ಲಿ ಬೇಡುವುದು ಮುಂತಾದ ಉದ್ದೇಶಗಳಿಂದ ಸಮಾಧಿ ಸಂದರ್ಶನ ಮಾಡುವುದು ನೂತನವಾಗಿ ಆವಿಷ್ಕರಿಸಲಾದ ನಿಷೇಧಿತ ಸಂದರ್ಶನವಾಗಿದೆ. ಇದು ಅಲ್ಲಾಹು ಅಥವಾ ಅವನ ಸಂದೇಶವಾಹಕರು (ಸ) ಆದೇಶಿಸಿದ ಕಾನೂನುಬದ್ಧ ಸಂದರ್ಶನವಲ್ಲ, ಮತ್ತು ಸಜ್ಜನ ಪೂರ್ವಿಕರು ಯಾರೂ ಇಂತಹ ಒಂದು ಸಂದರ್ಶನವನ್ನು ಮಾಡಿಲ್ಲ. ಇದಲ್ಲದೆ, ಸಮಾಧಿಯಲ್ಲಿರುವವರೊಡನೆ ಇಷ್ಟಾರ್ಥಗಳನ್ನು ಈಡೇರಿಸಲು ಅಥವಾ ರೋಗಿಗಳನ್ನು ಗುಣಪಡಿಸಲು ಬೇಡುವುದು ಮುಂತಾದ ಉದ್ದೇಶಗಳಿಂದ ಸಮಾಧಿ ಸಂದರ್ಶನ ಮಾಡುವುದಾದರೆ ಅದು ದೊಡ್ಡ ಶಿರ್ಕ್ (ಸಹಭಾಗಿತ್ವ) ಆಗಿದೆ.



**ಓದುಗರೇ, ಈ ವಿಷಯದಲ್ಲಿ ವರದಿಯಾದ ಕೆಲವು ಸ್ವಯಂ ನಿರ್ಮಿತ ಕೃತಕ ಹದೀಸ್‌ಗಳನ್ನು ನಿಮಗೆ ತಿಳಿಸುತ್ತಿದ್ದೇವೆ. ನೀವು ಅವುಗಳನ್ನು ತಿಳಿದುಕೊಳ್ಳಲು ಮತ್ತು ಅವುಗಳಿಂದ ಮೋಸಹೋಗದಂತೆ ಎಚ್ಚರಿಕೆ ವಹಿಸಲು:**

- ಮೊದಲನೆಯದು: "ಯಾರು ಹಜ್ಜ್ ನಿರ್ವಹಿಸಿಯೂ ನನ್ನನ್ನು (ನನ್ನ ಸಮಾಧಿಯನ್ನು) ಸಂದರ್ಶಿಸುವುದಿಲ್ಲವೋ ಅವರು ನನ್ನನ್ನು ನಿರ್ಲಕ್ಷಿಸಿದ್ದಾರೆ."

- ಎರಡನೆಯದು: "ನಾನು ಮರಣಾನಂತರ ಯಾರು ನನ್ನನ್ನು ಸಂದರ್ಶಿಸುತ್ತಾರೋ, ಅವರು ನನ್ನ ಜೀವಿತಾವಧಿಯಲ್ಲಿ ನನ್ನನ್ನು ಸಂದರ್ಶಿಸಿದಂತೆ."

- ಮೂರನೆಯದು: "ಯಾರು ನನ್ನನ್ನು ಮತ್ತು ನನ್ನ ತಂದೆ ಇಬ್ರಾಹೀಮ್‌ರನ್ನು ಒಂದೇ ವರ್ಷದಲ್ಲಿ ಸಂದರ್ಶಿಸುತ್ತಾರೋ, ಅವರಿಗೆ ಅಲ್ಲಾಹನಿಂದ ಸ್ವರ್ಗವನ್ನು ನಾನು ಖಾತರಿಪಡಿಸುತ್ತೇನೆ."

- ನಾಲ್ಕನೆಯದು: "ಯಾರು ನನ್ನ ಸಮಾಧಿಯನ್ನು ಸಂದರ್ಶಿಸುತ್ತಾರೋ, ಅವರಿಗೆ ನನ್ನ ಶಿಫಾರಸ್ಸು ಕಡ್ಡಾಯವಾಗುತ್ತದೆ."

**ಈ ಹದೀಸ್‌ಗಳು ಮತ್ತು ಇವುಗಳನ್ನು ಹೋಲುವ ಇತರ ಯಾವುದೇ ಹದೀಸ್‌ಗಳು ಪ್ರವಾದಿ (ಸ) ಅವರಿಂದ ಅಧಿಕೃತವಾಗಿ ವರದಿಯಾಗಿಲ್ಲ. ಹಾಫಿಝ್ ಉಖೈಲಿ ಹೇಳುತ್ತಾರೆ: "ಈ ವಿಷಯದಲ್ಲಿ ಯಾವುದೇ ಹದೀಸ್ ಸಹೀಹ್ ಆಗಿ ವರದಿಯಾಗಿಲ್ಲ." ಹಾಫಿಝ್ ಇಬ್ನ್ ಹಜರ್ ತಮ್ಮ ತಲ್ಖೀಸ್‌ನಲ್ಲಿ - ಈ ಕಟ್ಟುಕಥೆಗಳನ್ನು ಉಲ್ಲೇಖಿಸಿದ ನಂತರ - ಈ ಹದೀಸ್‌ನ ಎಲ್ಲಾ ಸನದ್‌ಗಳು ದುರ್ಬಲವಾಗಿವೆ ಎಂದು ಹೇಳಿದ್ದಾರೆ. ಹಜ್ಜ್ ಅಥವಾ ಉಮ್ರಾದ ಮೊದಲು ಅಥವಾ ನಂತರ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವುದು ಹಜ್ಜ್ ಅಥವಾ ಉಮ್ರಾದ ಸುನ್ನತ್‌ಗಳಲ್ಲಿ ಅಥವಾ ಅವುಗಳ ಪೂರ್ಣತೆಯಲ್ಲಿ ಸೇರಿಲ್ಲ. ಏಕೆಂದರೆ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವುದು ಸಂಪೂರ್ಣವಾಗಿ ಅಪೇಕ್ಷಣೀಯ ಕಾರ್ಯವಾಗಿದೆ. ಆದ್ದರಿಂದ ಹಜ್ಜ್ ಅಥವಾ ಉಮ್ರಾ ನಿರ್ವಹಿಸುವವರು ಅದನ್ನು ಸಂದರ್ಶಿಸದಿದ್ದರೆ, ಅವನಿಗೆ ಯಾವುದೇ ದೋಷವಿಲ್ಲ. ಹಜ್ಜ್ ಅಥವಾ ಉಮ್ರಾ ಮತ್ತು ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯ ಸಂದರ್ಶನದ ನಡುವೆ ಯಾವುದೇ ಸಂಬಂಧವಿಲ್ಲ. ಅವು ಪ್ರತ್ಯೇಕ ಆರಾಧನೆಗಳಾಗಿವೆ. ಆದ್ದರಿಂದ ಹಜ್ಜ್ ಅಥವಾ ಉಮ್ರಾ ನಿರ್ವಹಿಸುವವರು ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವುದು ಕಡ್ಡಾಯವಲ್ಲ. ಹಾಗೆಯೇ ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸಿದವರಿಗೆ ಹಜ್ಜ್ ಅಥವಾ ಉಮ್ರಾ ಮಾಡುವುದು ಕಡ್ಡಾಯವಲ್ಲ. ಒಂದೇ ಪ್ರಯಾಣದಲ್ಲಿ ಹಜ್ಜ್, ಉಮ್ರಾ ಮತ್ತು ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯ ಸಂದರ್ಶನವನ್ನು ಒಟ್ಟಿಗೆ ನಿರ್ವಹಿಸಿದರೂ ಅದರಲ್ಲಿ ಯಾವುದೇ ತೊಂದರೆಯಿಲ್ಲ.**

ضيوف الرحمن
hajjumrh.com

# ಪ್ರವಾದಿ ಮಸೀದಿ (ಮಸ್ಜಿದುನ್ನಬವಿ) ಯನ್ನು ಸಂದರ್ಶಿಸುವವರು ಮಾಡುವ ತಪ್ಪುಗಳು

1. ಪ್ರವಾದಿ (ಸ) ರವರ ಸಮಾಧಿಯನ್ನು ಸಂದರ್ಶಿಸುವಾಗ ಗೋಡೆಗಳು ಮತ್ತು ಕಬ್ಬಿಣದ ಸರಳುಗಳನ್ನು ಸ್ಪರ್ಶಿಸುವುದು ಮತ್ತು ಬರಕತ್‌ಗಾಗಿ ಕಿಟಕಿಗಳಿಗೆ ದಾರ ಮುಂತಾದವುಗಳನ್ನು ಕಟ್ಟುವುದು.

ಬರಕತ್ ಇರುವುದು ಅಲ್ಲಾಹು ಮತ್ತು ಅವನ ಸಂದೇಶವಾಹಕರು (ಸ) ಧರ್ಮನಿಯಮವಾಗಿ ಮಾಡಿರುವುದರಲ್ಲಿ ಮಾತ್ರವೇ ಹೊರತು ನೂತನವಾಗಿ ಆವಿಷ್ಕರಿಸಿದ್ದರಲ್ಲಿ ಅಲ್ಲ.

2. ಉಹುದ್ ಪರ್ವತದ ಗುಹೆಗಳಿಗೆ ಹೋಗುವುದು ಮತ್ತು ಅದೇ ರೀತಿ ಮಕ್ಕಾದ ಹಿರಾ ಗುಹೆ ಮತ್ತು ಸೌರ್ ಗುಹೆಗಳಿಗೆ ಹೋಗುವುದು, ಅಲ್ಲಿ ಬಟ್ಟೆ ತುಂಡುಗಳನ್ನು ಕಟ್ಟುವುದು ಮತ್ತು ಅಲ್ಲಾಹು ಅನುಮತಿಸದ ಪ್ರಾರ್ಥನೆಗಳನ್ನು ಪ್ರಾರ್ಥಿಸುವುದು ಹಾಗೂ ಅದಕ್ಕಾಗಿ ಪರಿಶ್ರಮ ಪಡುವುದು.

**ಇವೆಲ್ಲವೂ ಬಿದ್‌ಅತ್‌ಗಳಾಗಿದ್ದು ಪರಿಶುದ್ಧ ಶರಿಯತ್‌ನಲ್ಲಿ ಇವುಗಳಿಗೆ ಯಾವುದೇ ಆಧಾರವಿಲ್ಲ.**



3 ಪ್ರವಾದಿ (ಸ) ರವರ ಕುರುಹುಗಳು (ಅವಶೇಷಗಳು) ಎಂದು ನಂಬಲಾಗುವ ಒಂಟೆ ಮೊಣಕಾಲೂರಿದ ಸ್ಥಳ, ಉಂಗುರದ ಬಾವಿ ಅಥವಾ ಉಸ್ಮಾನ್(ರ) ರವರ ಬಾವಿ ಮುಂತಾದ ಸ್ಥಳಗಳಿಗೆ ಭೇಟಿ ನೀಡುವುದು ಮತ್ತು ಬರಕತ್‌ಗಾಗಿ ಆ ಸ್ಥಳಗಳಿಂದ ಮಣ್ಣನ್ನು ತೆಗೆದುಕೊಳ್ಳುವುದು.

4 ಬಕೀಅ ಕಬರಸ್ಥಾನ ಮತ್ತು ಉಹುದ್ ಹುತಾತ್ಮರ ಕಬರಸ್ಥಾನಗಳನ್ನು ಸಂದರ್ಶಿಸುವಾಗ ಮೃತರನ್ನು ಕರೆದು ಪ್ರಾರ್ಥಿಸುವುದು ಮತ್ತು ಅವುಗಳ ಸಾಮೀಪ್ಯ ಪಡೆಯಲು ಹಾಗೂ ಅವುಗಳಲ್ಲಿರುವ ಮೃತರಿಂದ ಬರಕತ್ ಪಡೆಯಲು ಅಲ್ಲಿ ಹಣವನ್ನು ಎಸೆಯುವುದು.

ಇವೆಲ್ಲವೂ ಗಂಭೀರ ತಪ್ಪುಗಳಾಗಿವೆ. ಮಾತ್ರವಲ್ಲ, ವಿದ್ವಾಂಸರು ಹೇಳುವಂತೆ, ಮತ್ತು ಅಲ್ಲಾಹನ ಗ್ರಂಥ ಹಾಗೂ ಅವನ ಸಂದೇಶವಾಹಕರ (ಸ) ಸುನ್ನತ್‌ನಲ್ಲಿ ಸೂಚಿಸಲಾಗಿರುವಂತೆ ಇವು ದೊಡ್ಡ ಶಿರ್ಕ್ ಆಗಿವೆ. ಏಕೆಂದರೆ ಆರಾಧನೆಯು ಅಲ್ಲಾಹನಿಗೆ ಮಾತ್ರ ಮೀಸಲಾಗಿರಬೇಕು. ಪ್ರಾರ್ಥನೆ, ಬಲಿ, ಹರಕೆ ಮುಂತಾದ ಆರಾಧನೆಯ ಯಾವುದೇ ವಿಧವನ್ನು ಅವನ ಹೊರತು ಯಾರಿಗೂ ಅರ್ಪಿಸಬಾರದು. ಏಕೆಂದರೆ ಅಲ್ಲಾಹು ಹೇಳುತ್ತಾನೆ:

﴿وَمَا أُمِرُوا إِلَّا لِيَعْبُدُوا اللَّهَ مُخْلِصِينَ لَهُ الدِّينَ﴾

"ಧರ್ಮವನ್ನು ಅಲ್ಲಾಹನಿಗೆ ನಿಷ್ಕಳಂಕವಾಗಿಸಿ ಏಕನಿಷ್ಠರಾಗಿ ಅವನನ್ನು ಮಾತ್ರ ಆರಾಧಿಸಿರಿ ಎಂದಲ್ಲದೆ ಬೇರೇನನ್ನೂ ಅವರಿಗೆ ಆದೇಶಿಸಲಾಗಿರಲಿಲ್ಲ." [ಅಲ್-ಬಯ್ಯಿನ: 5]

**ಅಲ್ಲಾಹನೇ ಹೆಚ್ಚು ಬಲ್ಲವನು. ನಮ್ಮ ಪ್ರವಾದಿ ಮುಹಮ್ಮದ್ (ಸ) ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಎಲ್ಲಾ ಸಹಚರರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.**

# تعرف على الإسلام

# بأكثر من 100 لغة

موسوعة الأحاديث النبوية
HadeethEnc.com

ترجمات متقنة للأحاديث النبوية وشروحها بأكثر من (60) لغة

بيان الإسلام
byenah.com

مواد منتقاة للتعريف بالإسلام وتعليمه بأكثر من (120) لغة

موسوعة القرآن الكريم
QuranEnc.com

ترجمات متقنة لمعاني القرآن الكريم بأكثر من (75) لغة

موسوعات وخدمات إسلامية باللغات
s.islamenc.com

للمزيد
من المواقع الإسلامية
بلغـــات العـــالم

جامع المحتوى الإسلامي باللغات
islamcontent.com

مواد إسلامية متنوعة وشاملة بأكثر من (125) لغة

ضيوف الرحمن
hajjumrh.com

مواد منتقاة للحجـــاج
والمعتمرين و الزوار
بلغات العالم

جمعية خدمة المحتوى الإسلامي باللغات

ضيوف الرحمن
hajjumrh.com